ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

DKC-32012/37/2018

ಕನ್ನಡ ಭವನ ಜೆ.ಸಿ. ರಸ್ತೆ

ಬೆಂಗಳೂರು.-02 ದಿನಾಂಕ:28-3-2018

ರಿಜಿಸ್ಟ್ರಾರ್

ರಾಜ್ಯದ ಎಲ್ಲಾ ಅಕಾಡೆಮಿಗಳು

ಬೆಂಗಳೂರು /ಮಂಗಳೂರು/ಮಡಕೇರಿ

ಮಾನ್ನರೆ

ವಿಷಯ;ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯದ ವಿವಿಧ ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ನೀಡುತ್ತಿರುವ ಸಭಾ ಭತ್ತೆ ಮತ್ತು ಅಧ್ಯಕ್ಷರುಗಳಿಗೆ ನೀಡುತ್ತಿರುವ ಸ್ಥಳೀಯ ವಾಹನ ವೆಚ್ಚ ಮತ್ತು ಮಾಸಿಕ ಗೌರವಧನ ಹಾಗೂ ಇನ್ನಿತರ ಸೌಲಭ್ಯಗಳನ್ನು ಪರಿಸ್ಕೃತ ಅದೇಶ.

ಉಲ್ಲೇಖ; ಸರ್ಕಾರಿ ಅದೇಶ ಸಂಖ್ಯೆ ಕಸಂವಾ;383;ಕಸಧ2017 ಬೆಂಗಳೂರು ದಿನಾಂಕ 26-03-2018

============

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯದ ವಿವಿಧ ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ನೀಡುತ್ತಿರುವ ಸಭಾ ಭತ್ತೆ ಮತ್ತು ಅಧ್ಯಕ್ಷರುಗಳಿಗೆ ನೀಡುತ್ತಿರುವ ಸ್ಥಳೀಯ ವಾಹನ ವೆಚ್ಚ ಮತ್ತು ಮಾಸಿಕ ಗೌರವಧನ ಹಾಗೂ ಇನ್ನಿತರೆ ಸೌಲಭ್ಯಗಳ ಬಗ್ಗೆ ಪರಿಷ್ಕರಿಸುವ ಕುರಿತು ಉಲ್ಲೇಖಿತ (1) ರಲ್ಲಿ ಸರ್ಕಾರದ ಪರಿಸ್ಕೃತ.ಅದೇಶವಾಗಿರುತ್ತದೆ. ಸದರಿ ಅದೇಶದಂತೆ ದಿನಾಂಕ 1-4-2018 ರಿಂದ ಜಾರಿಗೆ ಬರುವಂತೆ ಕ್ರಮ ವಹಿಸುವಂತೆ ಸೂಚಿಸಲಾಗಿದೆ. (ಪ್ರತಿ ಲಗತ್ತಿಸಿದೆ)

ತಮ್ಮ ವಿಶ್ವಾಸಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು

<u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ರಾಜ್ಯದ ವಿವಿಧ ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ನೀಡುತ್ತಿರುವ ಸಭಾ ಭತ್ಯೆ ಮತ್ತು ಅಧ್ಯಕ್ಷರುಗಳಿಗೆ ನೀಡುತ್ತಿರುವ ಸ್ಥಳೀಯ ವಾಹನ ವೆಚ್ಚ ಮತ್ತು ಮಾಸಿಕ ಗೌರವಧನ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 1312 ಕಸಧ 2012/2011, ದಿನಾಂಕ:26-03-2012.
2. ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ ಇವರ ಪತ್ರ ಸಂಖ್ಯೆ:ಕನಾಅ/2017-18/431, ದಿನಾಂಕ:21-11-2017 ಮತ್ತು ಪತ್ರ ಸಂಖ್ಯೆ:ಕನಾಅ/2017-18/731, ದಿನಾಂಕ:24-03-2018.
3. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಪತ್ರ ಸಂಖ್ಯೆ:ಡಿಕೆಸಿ/32012/38/2017, ದಿನಾಂಕ:06-12-2017 ಮತ್ತು ಪತ್ರ ಸಂಖ್ಯೆ:ಡಿಕೆಸಿ/32012/37/2017-18 ದಿನಾಂಕ:23-03-2018.

ಕ್ರ.ಸಂಖ್ಯೆ 11029
ದಿನಾಂಕ 26/3/18

* * * *

<u>ಪ್ರಸ್ತಾವನೆ:</u>

ಮೇಲೆ ಓದಲಾದ (1) ರ ಆದೇಶದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ರಾಜ್ಯದ ವಿವಿಧ ಅಕಾಡೆಮಿಗಳ ಅಧ್ಯಕ್ಷರಿಗೆ ವಾಹನ ವೆಚ್ಚ ಹಾಗೂ ಮಾಸಿಕ ಗೌರವಧನವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಆದೇಶ ಹೊರಡಿಸಿದೆ.

ಮೇಲೆ ಓದಲಾದ (2) ರ ಪತ್ರದಲ್ಲಿ ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ಅಕಾಡೆಮಿಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಬೇಡಿಕೆಗಳನ್ನು ಪರಿಗಣಿಸಿ ಸರ್ಕಾರದ ಹಂತದಲ್ಲಿ ಸೂಕ್ತ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

26/3

1) ಅಕಾಡೆಮಿ ಸದಸ್ಯರಿಗೆ ಈಗ ನೀಡುತ್ತಿರುವ ಸಭಾಭತ್ಯೆ ರೂ.500/- ಗಳನ್ನು ರೂ.1,000/- ಗಳಿಗೆ ಹೆಚ್ಚಿಸುವುದು.

2) ಈಗಿರುವ ಅಂಗರಚನೆಯಂತೆ, ಅಕಾಡೆಮಿ ಅಧ್ಯಕ್ಷರಿಗೆ ವಾಹನ ಸೌಲಭ್ಯ ಕಲ್ಪಿಸಲಾಗಿಲ್ಲ. ಹೀಗಾಗಿ ಕಾರ್ಯಕ್ರಮಗಳಿಗಾಗಿ ನಡೆಸುವ ಓಡಾಟ ಶ್ರಮದಾಯಿಕವಾಗಿದೆ. ಈ ಕಾರಣದಿಂದ ಅಧ್ಯಕ್ಷರಿಗೆ ವಾಹನ ಸೌಲಭ್ಯವನ್ನು ಕಲ್ಪಿಸಲು, ಈಗಿರುವ ಸರ್ಕಾರಿ ಆದೇಶದಂತೆ, ಮಾಸಿಕ ಹೊರಗುತ್ತಿಗೆ ಆಧಾರದ ಮೇಲೆ ವಾಹನವನ್ನು ನೇಮಿಸಿಕೊಳ್ಳಲು ಅವಕಾಶ ನೀಡುವುದು ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ಸಂದರ್ಭದಲ್ಲಿ ಅದೇ ವಾಹನವನ್ನು ಪರ ಊರಿಗೂ ಪ್ರಯಾಣಿಸಲು ಅನುಮತಿಸುವುದು.

2/...

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
27 MAR 2018

3) ಈಗಿರುವ ಅಂಗರಚನೆಯಂತೆ, ಜರೂರು ಸಂದರ್ಭದಲ್ಲಿ ರಿಜಿಸ್ಟ್ರಾರ್/ ಲೆಕ್ಕಪತ್ರಾಧಿಕಾರಿ ಯಾರಾದರೂ ಒಬ್ಬರ ಸಹಿಯಲ್ಲಿ ಡ್ರಾ ಮಾಡಬಹುದಾದ ಮೊತ್ತ ರೂ.1,000/- ಗಳಿದೆ. ಅದನ್ನು ರೂ.10,000/- ಗಳಿಗೆ ಹೆಚ್ಚಿಸುವುದು.

4) ಈಗಿರುವ ಅಂಗರಚನೆಯಂತೆ, ಅಧ್ಯಕ್ಷರು ತಮ್ಮ ವಿವೇಚನೆ ಮೇರೆಗೆ ಪ್ರತಿವರ್ಷ ರೂ.20,000/- ಗಳನ್ನು ವೆಚ್ಚ ಮಾಡಬಹುದು. ಅದನ್ನು ಸ್ಥಾಯಿಸಮಿತಿಯಲ್ಲಿ ಘಟನೋತ್ತರ ವಿವರಗಳನ್ನು ನೀಡಲಾಗುತ್ತಿತ್ತು. ಈ ಕಾಲಮಾನಕ್ಕೆ ತಕ್ಕಂತೆ, ಈ ಮೊತ್ತವನ್ನು ರೂ.1,00,000/- ಗಳಿಗೆ ಹೆಚ್ಚಿಸುವುದು.

5) ಈಗಿರುವ ಅಂಗರಚನೆಯಂತೆ, ಅಧ್ಯಕ್ಷರ ಗೌರವ ಸಂಭಾವನೆಯನ್ನು ರೂ.20,000/- ಗಳಿಗೆ ನಿಗದಿಪಡಿಸಲಾಗಿತ್ತು. ಈಗ ಈ ಮೊತ್ತವನ್ನು ಹೆಚ್ಚಿಸಿ, ಅಧ್ಯಕ್ಷರ ಗೌರವ ಸಂಭಾವನೆಯನ್ನು ಮಾಸಿಕ ರೂ.30,000/- ಗಳಿಗೆ ನಿಗದಿಪಡಿಸುವುದು.

ಮೇಲೆ ಓದಲಾದ (3) ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಸದರಿ ಅಕಾಡೆಮಿಗಳ ಅಂಗರಚನೆಯ ನಿಯಮಾವಳಿಯನ್ನು ಮಾರ್ಪಡಿಸಿದಲ್ಲಿ ವಾರ್ಷಿಕವಾಗಿ ಸರ್ಕಾರಕ್ಕೆ ಉಂಟಾಗುವ ವೆಚ್ಚದ ವಿವರಗಳನ್ನು ಒದಗಿಸಿದ್ದು, ಈ ಬಗ್ಗೆ ಸರ್ಕಾರದ ಹಂತದಲ್ಲಿ ನಿರ್ಣಯಿಸಿ ಸೂಕ್ತ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ. ಅದರಂತೆ ಸದರಿ ಅಂಗರಚನೆಯ ನಿಯಮಾವಳಿಗಳನ್ನು ಕ್ರೋಡೀಕರಿಸಿ ಸರ್ಕಾರದ ಆದೇಶ ಹೊರಡಿಸಲು ಉದ್ದೇಶಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 383 ಕಸಧ 2017,**
**ಬೆಂಗಳೂರು, ದಿನಾಂಕ:26-03-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯವ್ಯಾಪ್ತಿಯಡಿಯಲ್ಲಿ ಬರುವ ವಿವಿಧ ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ರಿಜಿಸ್ಟ್ರಾರ್‌ಗಳಿಗೆ ಸಂಬಂಧಿಸಿದಂತೆ ಇರುವ ಅಧಿಕಾರ ಮತ್ತು ಕಾರ್ಯಹಂಚಿಕೆ ಹಾಗೂ ಸೌಲಭ್ಯಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಿದೆ.

| ಕ್ರ.ಸಂ. | ಪ್ರಸ್ತುತ ಇರುವ ಸೌಲಭ್ಯ | ಪರಿಷ್ಕರಿಸಿದ ಸೌಲಭ್ಯ |
|---|---|---|
| 1 | ರೂ.500/- ಗಳ ಸಭಾ ಭತ್ಯೆಯನ್ನು ನೀಡಲಾಗುತ್ತಿದೆ | ಸಭಾ ಭತ್ಯೆಯನ್ನು ರೂ.500 /- ರಿಂದ ರೂ.750/- ಕ್ಕೆ ಹೆಚ್ಚಿಸಿದೆ. |
| 2 | ವಿವಿಧ ಅಕಾಡೆಮಿಗಳ ಅಧ್ಯಕ್ಷರುಗಳಿಗೆ ಕಚೇರಿಗೆ ಸಂಬಂಧಪಟ್ಟ ಕೆಲಸಕಾರ್ಯಗಳ ಸ್ಥಳೀಯ ಪ್ರವಾಸಕ್ಕಾಗಿ ಮಾಸಿಕ ರೂ.10,000/- ರಂತೆ ಪ್ರಯಾಣ ಭತ್ಯೆಯನ್ನು ಮಂಜೂರು ಮಾಡಿದೆ. | ಸರ್ಕಾರ ನಿಗದಿಪಡಿಸಿರುವ ದರಪಟ್ಟಿಯಂತೆ ಖಾಸಗಿ ಸಂಸ್ಥೆಯಿಂದ ಒಂದು ವಾಹನವನ್ನು ಪಡೆದುಕೊಳ್ಳುವುದು, ಮಾಸಿಕ ರೂ.30,000/- ವೆಚ್ಚದ ಗರಿಷ್ಠ ಮಿತಿಯನ್ನು ನಿಗದಿಪಡಿಸಿದೆ. |

3/...

| | | |
|---|---|---|
| 3 | ವಿವಿಧ ಅಕಾಡೆಮಿಗಳ ಅಧ್ಯಕ್ಷರುಗಳಿಗೆ ಮಾಸಿಕ ಗೌರವಧನ ರೂ.20,000/- ವನ್ನು ನೀಡಲಾಗುತ್ತಿದೆ. | ಮಾಸಿಕ ಗೌರವಧನವನ್ನು ರೂ.20,000/- ರಿಂದ ರೂ.25,000/- ಗಳಿಗೆ ಹೆಚ್ಚಿಸಿದೆ. |
| 4 | ಜರೂರು ಸಂದರ್ಭದಲ್ಲಿ ರಿಜಿಸ್ಟ್ರಾರ್/ ಲೆಕ್ಕಪತ್ರಾಧಿಕಾರಿ ಯಾರಾದರೂ ಒಬ್ಬರ ಸಹಿಯಲ್ಲಿ ಡ್ರಾ ಮಾಡಬಹುದಾದ ಮೊತ್ತ ರೂ.1,000/- ಗಳಿದೆ. | ಈ ಮೊತ್ತವನ್ನು ರೂ.1,000/- ದಿಂದ ರೂ.10,000/- ಗಳಿಗೆ ಹೆಚ್ಚಿಸಿದೆ. |
| 5 | ಅಧ್ಯಕ್ಷರು ತಮ್ಮ ವಿವೇಚನೆ ಮೇರೆಗೆ ಪ್ರತಿವರ್ಷ ರೂ.20,000/- ಗಳನ್ನು ವೆಚ್ಚ ಮಾಡಬಹುದು | ಈ ಮೊತ್ತವನ್ನು ರೂ.20,000/- ದಿಂದ ರೂ.50,000/- ಗಳಿಗೆ ಹೆಚ್ಚಿಸಿದೆ. |

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ/147/ವೆಚ್ಚ-7/2018, ದಿನಾಂಕ:07-03-2018 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Malathi PS 26/3/18

[ಪಿ.ಎಸ್.ಮಾಲತಿ]
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.

ಗೆ:

1. ಮಹಾಲೇಖಪಾಲರು, ( ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
3. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಕಾಡೆಮಿಗಳ ಅಧ್ಯಕ್ಷರುಗಳು (ನಿರ್ದೇಶಕರ ಮುಖಾಂತರ)
4. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಕಾಡೆಮಿಗಳ ರಿಜಿಸ್ಟ್ರಾರುಗಳು (ನಿರ್ದೇಶಕರ ಮುಖಾಂತರ)
5. ಸರ್ಕಾರದ ಕಾರ್ಯದರ್ಶಿ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು / ಪತ್ರಾಗಾರ ಇಲಾಖೆ.